2ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ  ಚನ್ನಗಿರಿ .

ಸಿಸಿ ನಂ. **619/2018**

ಹೆಸರುಃ ವೀರಬಸಪ್ಪ ಕುಸಲಾಪುರ  ಚಾಸಾಃ 18

ತಂದೆಃ  ಲಕ್ಷ್ಮಪ್ಪ ಕುಸಲಾಪುರ  ಪ್ರಾಸಾ: 14

ವಯಸ್ಸುಃ  40 ವರ್ಷ

ಉದ್ಯೋಗಃ  ಪಿ ಐ, ಲೋಕಾಯುಕ್ತ

ವಾಸ ಸ್ಥಳಃ  ಶಿವಮೊಗ್ಗ

ಸಾಕ್ಷಿಗೆ ದಿನಾಂಕಃ 17.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದಃ**

ದಿಃ 23.07.2016 ರಿಂದ 30.07.2018 ರವರೆಗೆ ನಾನು ಚನ್ನಗಿರಿ ಪೊಲಿಸ್ ಠಾಣೆಯಲ್ಲಿ ಪಿಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.03.2017 ರಂದು ಚನ್ನಗಿರಿ ಠಾಣೆಯ ಸಿ ಆರ್  ನಂ. 105/2017 ರಲ್ಲಿ ಪಂಚರಾದ ಅಬ್ದುಲ್ ಮುನೀರ್, ಜಬೀವುಲ್ಲಾರವರ ಸಮಕ್ಷಮ ಚನ್ನಗಿರಿ ಪಟ್ಟಣದ ಎಸ್ ಎಸ್ ಜ್ಯುಯಲರ್ಸ್ ಮುಂಬಾಗ 3 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಅಮಾನತ್ತು ಪಂಚನಾಮೆ ಜರುಗಿಸಿದ್ದು ಅವರುಗಳ ಹೆಸರು ಅಫ್ರೋಜ್ ಅಹಮದ್, ಕುಮಾರ್ ಮತ್ತು ನಾಗೇಂದ್ರ. ಸದರಿಯವರನ್ನು  ವಶಕ್ಕೆ ಪಡೆದು ಮದ್ಯಾಹ್ನ  2.15 ರಿಂದ 3.00 ರವರೆಗೆ ಪಂಚರ ಸಮಕ್ಷಮ ಮಹಜರ್ ಜರುಗಿಸಿರುತ್ತೇನೆ. ಸಾಕ್ಷಿಯು ಮಹಜರ್ ಪ್ರತಿಯನ್ನು ನೋಡಿ ಗುರುತಿಸಿದ್ದು ಮಹಜರ್  ನ್ನು **ನಿಪಿ 15** ಸಾಕ್ಷಿಯ ಸಹಿಯನ್ನು **ನಿಪಿ 15(ಎ)** ಎಂದು ಗುರುತಿಸಲಾಯಿತು.  ಸದರಿ ಮಹಜರ್ ವೇಳೆ 2 ಮತ್ತು 3ನೇ ಆರೋಪಿಗಳು ತಮ್ಮ ಬಳಿ ಇದ್ದ ನಿಪಿ 8 ಮತ್ತು  ನಿಪಿ 10ರ ಚೀಟಿಗಳನ್ನು ಅಮಾನತ್ತು ಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂ. 83/2017 ರಲ್ಲಿ ನಮೂದಿಸಿರುತ್ತೇನೆ. ಸಾಕ್ಷಿಯು ನಿಪಿ 8 ಮತ್ತು 10 ರ

ಚೀಟಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 5 ಮಹಜರ್ ನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು **ನಿಪಿ 5(ಸಿ)** ಎಂದು ಗುರುತಿಸಲಾಯಿತು.

ಸದರಿ ಪ್ರಕರಣದಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಆರೋಪಿಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಈ ಪ್ರಸ್ತುತ ಪ್ರಕರಣಕ್ಕೆ ಸಂಬಂದಿಸಿದಂತೆ ಚನ್ನಗಿರಿ ತಾಲ್ಲೂಕಿನ ಮಲ್ಲೇಶ್ವರ ಗ್ರಾಮದಲ್ಲಿ ಒಂದು ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿ ತಮ್ಮ ಜೊತೆ ಬಂದರೆ ಕರೆದುಕೊಂಡು ಹೋಗಿ ತೋರಿಸಿವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯು ಸದರಿ ಹೇಳಿಕೆ ಪ್ರತಿಯನ್ನು ನೋಡಿ ಗುರುತಿಸಿದ್ದು " ನೀವು -------- ಹಾಜರುಪಡಿಸುತ್ತೇವೆ " ಎಂಬ ಹೇಳಿಕೆಯನ್ನು **ನಿಪಿ 12** ಎಂದು ಗುರುತಿಸಲಾಯಿತು. " ನೀವು -------- ತೋರಿಸುತ್ತೇವೆ " ಎಂಬ ಹೇಳಿಕೆಯನ್ನು **ನಿಪಿ 13** ಎಂದು ಗುರುತಿಸಲಾಯಿತು.

ದಿಃ 29.03.2017 ರಂದು ಕೃತ್ಯ ನಡೆದ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ರವರೆಗೆ ಚಾಸಾ 1 ರವರ ಮನೆಯ ಮುಂದೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ 6 ಮಹಜರ್ ನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು **ನಿಪಿ 6(ಸಿ)** ಎಂದು ಗುರುತಿಸಲಾಯಿತು. ನಿಪಿ 6 ಮಹಜರ್ ಕಾಲಕ್ಕೆ ಫೋಟೊವನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋವನ್ನು **ನಿಪಿ 14** ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಚಾಸಾ 1 ರವರ ಮನೆಯಲ್ಲಿ ಪಂಚರಾದ ಚಾಸಾ 4 ಮತ್ತು 5 ರವರ ಸಮಕ್ಷಮ ಸ್ಥಳ ಮಹಜರ್ ನ್ನು ಜರುಗಿಸಿರುತ್ತೇನೆ. ಸಾಕ್ಷಿಯು ನಿಪಿ 2 ಮಹಜರ್ ನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು **ನಿಪಿ 2(ಡಿ)** ಎಂದು ಗುರುತಿಸಲಾಯಿತು.

ಅದೇ ದಿನ ಪ್ರಕರಣಕ್ಕೆ ಸಂಬಂದಿಸಿದಂತೆ ಚಾಸಾ 1, 6 ಮತ್ತು 7 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಚಾಸಾ 13 ರಿಂದ 16 ರವರ ಹೇಳಿಕೆಗಳನ್ನು ಪಡೆದು

ಕಡತಕ್ಕೆ ಅಳವಡಿಸಿರುತ್ತೇನೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ 19 ರವರಿಗೆ ಹಸ್ತಾಂತರಿಸಿರುತ್ತೇನೆ.

ನಾನು ಆರೊಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1ನೇ ಆರೋಪಿ ಹಾಗೂ ವಿಸಿ ಮೂಲಕ ಹಾಜರಿರುವ 3ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿಯನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ನಾನು ಮುಮಾ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮುಮಾ ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ</u>**

ಆರೋಪಿಗಳು ಎಸ್ ಎಸ್ ಜ್ಯುಯಲರ್ಸ್ ನ ಮುಂದೆ ಬಂದಿರುವುದಿಲ್ಲ ನಾನು ಅವರುಗಳನ್ನು ದಸ್ತಗಿರಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಎಸ್ ಎಸ್ ಜ್ಯುಯಲರ್ಸ್ ನ ಮುಂದೆ ಆರೊಗಪಿಳನ್ನು ದಸ್ತಗಿರಿ ಮಾಡಿ ಅಮಾನತ್ತು ಮಹಜರ್ ಕ್ರಮ ಜರುಗಿಸಿರುವ ಬಗ್ಗೆ ಎಸ್ ಎಸ್ ಜ್ಯುಯಲರ್ಸ್ ಕಾಣುವ ರೀತಿ ಫೋಟೊ ತೆಗೆದಿರುವುದಿಲ್ಲ ಬೇರೆ ರೀತಿಯಲ್ಲಿ ತೆಗೆದಿರುತ್ತೇವೆ. ಎಸ್ ಎಸ್ ಜ್ಯುಯಲರ್ಸ್ ನ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸದರಿ ಅಂಗಡಿ ಹೆಸರುವಾಸಿ ಅಂಗಡಿಯಾದ್ದರಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ. ಆರೋಪಿಗಳು ಎಸ್ ಎಸ್ ಜ್ಯುಯಲರ್ಸ್ ಮುಂದೆ ಬಂದಿದ್ದರು ಎಂದು ನಾನು ಸೃಷ್ಟಿ ಮಾಡಿಕೊಂಡ ಕತೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ನಾನು ಎಸ್ ಎಸ್ ಜ್ಯುಯಲರ್ಸ್ ಬಳಿ ಯಾವುದೆ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಚಾಸಾ 1 ರವರ ಮನೆಗೆ ಸಂಬಂದಿಸಿದ ದಾಖಲೆಗಳನ್ನು ನಾನು ಅಮಾನತ್ತು ಪಡಿಸಿಕೊಂಡಿಲ್ಲ ಮುಂದಿನ ತನಿಖಾದಿಕಾರಿ ಮಾಡಿರಬಹುದು. ಮಲ್ಲೇಶ್ವರ ಗ್ರಾಮದಲ್ಲಿ ಚಾಸಾ 1ರವರ ಯಾವುದೇ ಮನೆ ಇರವುದಿಲ್ಲ ನಾನು ಈ ಪ್ರಕರಣಕ್ಕಾಗಿ ಕೃತ್ಯ ನಡೆದ ಸ್ಥಳ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆಂದು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಮಾಗಳನ್ನು

ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು 1ನೆ ಆರೋಪಿ ತೋರಿಸಿದ ಚಾಸಾ 1 ರವರ ಮನೆಯಲ್ಲಿ ಅಮನತ್ತು ಮಹಜರ್ ಕ್ರಮ ಜರುಗಿಸಿರುತ್ತೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾಗಳಿಗೂ ಆರೋಪಿಗಳಿಗೂ ಯಾವುದೇ ಸಂಬಂದ ಇಲ್ಲದಿದ್ದರು ಅವುಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 8 ರಿಂದ 12 ರವರ ಯಾವುದೇ ಹೇಳಿಕೆಗಳನ್ನು ಪಡೆದುಕೊಳ್ಳದೇ ಇದ್ದರೂ ಹೇಳಿಕೆ ಪಡೆದುಕೊಂಡಿರುತ್ತೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ 15 ಮಹಜರ್ ನ್ನು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ವೇಳೆಯಲ್ಲಿ ಅಮಾನತ್ತುಪಡಿಸಿಕೊಂಡ ಮುಮಾಗಳ ಫೋಟೋ ತೆಗೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು 1ನೇ ಆರೋಪಿಯ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

(3ನೇ ಆರೋಪಿಯು 1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂಡ ಮೇರೆಗೆ ಅಳವಡಿಸಿಕೊಳ್ಳಲಾಯಿತು. )

**ಮರುವಿಚಾರಣೆ ಇಲ್ಲ**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**